ಶ್ರೀ ಎಸ್. ನಿಜಲಿಂಗಪ್ಪ.—ಕೂಡಲೇ ವಿಚಾರ ಮಾಡುತ್ತೇವೆ.

ಶ್ರೀ ಬಿ. ಪಿ. ಗಂಗಾಧರ.—ಹರಿಜನ ಗಿರಿಜನರು ಡೌನ್ ಟ್ರಾಡನ್ ಕಮ್ಯುನಿಟಿ ಆಗಿದ್ದಾರೆ ಅವರಿಗೆ ನ್ಯಾಯ ದೊರಕಬೇಕು ಎಂದು ಬೀರಪ್ಪ ಕಮಿಟಿ ರಿಪೋರ್ಟ್ ಮಾಡಿದ್ದು. ಆ ಕಮಿಟಿಯು ಶಿಫಾರಸ್ಸುಗಳನ್ನು ಅನುಮೋದಿಸುವುದಕ್ಕೆ ಕಷ್ಟ ಎಂದು ಹೇಳುತ್ತೀರಿ. ಇದರಲ್ಲಿ ಏನು ಕಷ್ಟ ಇದೆ ? ಕಷ್ಟ ಇದೆ ಎಂದು ಆ ವರದಿಯ ಶಿಫಾರಸ್ಸುಗಳನ್ನು ಬಿಟ್ಟು ಬಿಟ್ಟಿದ್ದೀರಾ ಅದನ್ನು ಹೇಳಬೇಕು.

ಶ್ರೀ ಎಸ್. ನಿಜಲಿಂಗಪ್ಪ.—ಸರ್ಕಾರದ ಉದ್ದೇಶ ನೆರವೇರುವುದಕ್ಕೆ ಏನೇನು ಮಾಡಬೇಕೋ ಅದನ್ನು ಮಾಡುತ್ತೇವೆ. ಆ ಕಮಿಟಿ ರಿಪೋರ್ಟ್ ಇಂಪ್ಲಿಮೆಂಟ್ ಮಾಡಕ್ಕಾಗುವುದಿಲ್ಲ ಎಂದು ಹೇಳಿದ್ದೇನೆ.

ಶ್ರೀ ಎಸ್. ಶಿವಪ್ಪ.—18 ಪರ್ಸೆಂಟ್ ದಾಮಾಷಾ ಪ್ರಕಾರ ಅವರಿಗೆ ದೊಡ್ಡ ಕೆಲಸ ಕೊಡಬೇಕು ಎಂದು ಇರುವಾಗ್ಗೆ 18 ಪರ್ಸೆಂಟ್ ದಾಮಾಷ ಮೇಲೆ ಆ ರೀತಿ ಮಂತ್ರಿಗಳ ನೇಮಕ ಮಾಡಿ ಕೆಲಸ ಕೊಟ್ಟಿದ್ದೀರಾ ? (ನಗುತ್ತಾ ಪ್ರಶ್ನೆ ಕೇಳಿದರು)

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ಪ್ರಶ್ನೆ ಕೇಳುವಾಗ ತಪ್ಪು ಪ್ರಶ್ನೆ ಕೇಳುತ್ತಿದ್ದುದರಿಂದ ಅವರು ನಗುತ್ತಿದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪ.—ಅವರು ಯಾವಾಗಲೂ ನಗುತ್ತಾರೆ. ನೀವೂ ಒಬ್ಬರು ಯಾವಾಗಲೂ ನಗುತ್ತಾ ಮಾತನಾಡುವವರು.

ಶ್ರೀ ಕೆ. ಎಚ್. ರಂಗನಾಥ.—ಸಾಕಷ್ಟು ಪ್ರಾತಿನಿಧ್ಯ ಅವರಿಗೆ ಕೊಡುತ್ತೇವೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದು ಸಂತೋಷದ ಸಂಗತಿ. ಅದೇ ರೀತಿ ನಿಮ್ಮ ವರ್ಗದವರ ಬಗ್ಗೆ ಲೆಜಿಸ್ಲೇಟಿವ್ ಕೌನ್ಸಿಲಕ್ಕೆ ನಾಮಕರಣ ಮಾಡತಕ್ಕಂಥ ಸದಸ್ಯರು ಹಾಗು ದೊಡ್ಡ ದೊಡ್ಡ ಹುದ್ದೆಗಳಿಗೆ ಡಿಸ್ಟ್ರಿಕ್ಟ್ ಜಡ್ಜ್‌ಗಳ ನೇಮಕ ಮಾಡುವಾಗ ಕೂಡ ಅದೇ ಮಾದರಿಯನ್ನು ಅನುಸರಿಸುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಕೌನ್ಸಿಲರ್ ಸದಸ್ಯರ ನಾಮಕರಣದ ಪ್ರಶ್ನೆ ಇದರಲ್ಲಿ ಉದ್ಭವಿಸುವುದಿಲ್ಲ. ಮೈಸೂರು ರಾಜ್ಯದಲ್ಲೆ ಹರಿಜನ ಗಿರಿಜನರಿಗೆ ಎಷ್ಟು ಉತ್ತೇಜನ ಕೊಡಬೇಕೋ ಅದನ್ನು ಉಳಿದ ರಾಜ್ಯಗಳಿಗಿಂತ ಹೆಚ್ಚಾಗಿ ಕೊಟ್ಟಿದೆ.

ಶ್ರೀ ಕೆ. ಎಚ್. ರಂಗನಾಥ.—(ಸಿ) ಪ್ರಶ್ನೆಗೆ ಇಲ್ಲ ಎಂದು ಉತ್ತರ ಹೇಳಿದೆ. ಆದರೆ ಕೆಲಸ ವಿಲ್ಲದೇ ಇರತಕ್ಕಂಥ ಜನ ಹೆಚ್ಚಾಗಿ ಇರುವುದರಿಂದ ಅದರ ಬಗ್ಗೆ ಸರಕಾರದವರು ಸ್ಟ್ಯಾಟಿಸ್ಟಿಕ್ಸ್ ತಯಾರ್ಮಾಡಿಸಿ ಅಂಥವರಿಗೆ ಕೆಲಸ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಈಗಾಗಲೇ ವ್ಯವಸ್ಥೆ ಮಾಡಿ ಆಗಿದೆ. ಯಾರಿಗಾದರೂ ಕೆಲಸ ಸಿಕ್ಕದೇ ಇದ್ದರೆ ಅದನ್ನು ನಮ್ಮ ಗಮನಕ್ಕೆ ತಂದರೆ ಬಹಳ ಉಪಕಾರವಾಗುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ನೂರಾರು ಜನ ಗ್ರ್ಯಾಜ್ಯುಯೇಟ್ಸ್ ಹತ್ತಾರು ಸಾವಿರ ಮ್ಯಾಟ್ರಿಕ್ಯುಲೇಟ್ಸ್ ನಿರುದ್ಯೋಗಿಗಳಾಗಿರುವವರ ಒಂದು ಪಟ್ಟಿ ತಂದು ತಮಗೆ ಕೊಡುತ್ತೇವೆ ಅವರಿಗೆ ತಕ್ಷಣ ಕೆಲಸ ಕೊಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಎಷ್ಟು ಜನರಿಗೆ ಕೆಲಸ ಕೊಡುವುದಕ್ಕೆ ಸಾಧ್ಯವೋ ಹಾಗೂ ಶೇಕಡ ಎಷ್ಟು ಪ್ರಮಾಣದಲ್ಲಿ ಕೊಡಬೇಕೋ ಆ ಪ್ರಕಾರ ಕೊಡುತ್ತೇವೆ. ಮಾನ್ಯ ಸದಸ್ಯರು ಪಟ್ಟಿ ತಂದು ಕೊಡಲಿ.

Murder Ceas in Raichur

105. Sri SADASHIVAPPA PATIL (Deodurg).—

Will the Ministr for Home and Municipal Administration be pleased to state :—

(*a*) the number of murder cases reported in the Raichur District during 1966-67 and 1967-68 ;

(*b*) reason for murder in each case ?

A.—Sri R. M. PATIL (Minister for Home and Municipal Administration).—

	1966-67	*1967-68*
(*a*)	40 cases.	49 cases.

Vide Statement appended.

(SRI R. M. PATIL)

STATEMENT

showing the reasons for murders in Raichur District during 1966-67 and 1967-68.

		1966-67 Cases	*1967-68 Cases*
1	Sexual jealousy	8	11
2	Land dispute	1	1
3	Illwill	5	8
4	Gain	...	1
5	Family dispute	2	1
6	Domestic affairs	10	8
	Other causes—		
	(*a*) Sudden quarrels	1	5
	(*b*) Petty quarrels for transactions	...	1
	(*c*) Technical murders in which the accused committed suicide along with their children on account of.—		
	(*i*) Domestic quarrels	...	2 Cases—in one case 2 children and in another case 3 children involved.
	(*ii*) Poverty stricken conditions	...	1 case—1 child involved
	(*iii*) Dejection in life	...	1 case—1 child involved
	(*d*) Cases in which identity of the deceased is not known	5	3
	(*e*) Due to insanity	1	...
	(*f*) Cases where motives and accused are not known	2	5
	(*g*) False	1	...
	(*h*) Due to mistake of fact	4	...
	(*i*) Transferred to other District	...	1
		40	49

•ಶ್ರೀ ನದಾಶಿವಪ್ಪ ಪಾಟೀರ್.—ಈ ಎರಡು ವರ್ಷಗಳಲ್ಲಿ ಆಗಿರುವ ಕೊಲೆ ಪ್ರಕರಣಗಳಲ್ಲಿ ಪೋಲೀಸರ ಕೈವಾಡವಿಲ್ಲ ಎನ್ನುವುದು ತಮ್ಮ ಅಭಿಪ್ರಾಯ ಎಂದು ಹೇಳುತ್ತೀರಾ ?

ಶ್ರೀ ಆರ್. ಎಂ. ಪಾಟೀರ್—ಪೋಲೀಸರ ಕೈವಾಡವಿಲ್ಲ ಎಂದು ರಿಪೋರ್ಟ್ ಇದೆ.

ಶ್ರೀ ನದಾಶಿವಪ್ಪ ಪಾಟೀರ್.—ದೇವದುರ್ಗ ತಾಲ್ಲೂಕಿನಲ್ಲಿ ಒಂದು ವರ್ಷಕ್ಕೆ ಮೊದಲು ಶಾಂತ ರೀತಿಯ ವಾತಾವರಣವಿತ್ತು. ಐ.ಜಿ.ಪಿ. ಅವರು ರಾಮದುರ್ಗದಿಂದ ದೇವದುರ್ಗ ಸ್ಪೇಷ ನ್ನಿಗೆ ಒಬ್ಬ ಸಬ್ ಇನ್‌ಸ್ಪೆಕ್ಟರನ್ನು ವರ್ಗ ಮಾಡಿದರು. ಆತ ಬಂದಮೇಲೆ ಸುಮಾರು 15-20 ಕ್ರಿಮಿನಲ್ ಲಿಟಗೇಷನ್‌ಗಳು ನಡೆದಿವೆ. ಇನ್ನೂ ಸ್ವಲ್ಪ ದಿವಸ ಆತನನ್ನು ಅಲ್ಲಿಯೇ ಮುಂದು ವರಿಸಿದರೆ ಕೊಲೆಯಾಗುವ ಸಂಭವವಿದೆ. ಅದರ ಬಗ್ಗೆ ಏನಾದರೂ ವಿಚಾರ ಮಾಡಬಹುದೋ ?

ಶ್ರೀ ಆರ್. ಎಂ. ಪಾಟೀರ್.—ಆ ವಿಷಯವನ್ನು ಪರಿಶೀಲನೆ ಮಾಡಲಾಗುವುದು.

ಶ್ರೀ ಎಂ. ನಾಗಪ್ಪ.—1966-67ರಲ್ಲಿ 40 ಕೊಲೆ ಪ್ರಕರಣಗಳೂ, 1967-68ರಲ್ಲಿ 49 ಕೊಲೆ ಪ್ರಕರಣಗಳೂ ನಡೆದಿವೆ. ಎಂದರೆ 9 ಕೇಸುಗಳು ಹೆಚ್ಚಿದಂತಾಯಿತು. ಅದೂ ಅಲ್ಲದೆ ತಾವು ಕೊಟ್ಟಿಂಥ ಪಟ್ಟಿಯಲ್ಲಿ ದ್ವೇಷದಿಂದ ನಡೆದಿರುವ ಕೊಲೆಗಳು 5 ರಿಂದ 8ಕ್ಕೆ ಏರಿವೆ, ಅನೀರೀಕ್ಷಿತ ಜಗಳಗಳಿಂದಾದುವು ಒಂದರಿಂದ 5ಕ್ಕೆ ಏರಿದೆ, ಇದನೆಲ್ಲ ನೋಡಿದರೆ ಪೋಲ್ಲೀಸ್ ಖಾತೆಯ ದಕ್ಷತೆ ಯೊಗೆ ಕೊರತೆಯುಂಟಾಗಿದೆ ಎನ್ನುವುದು ತಮ್ಮ ಗಮನಕ್ಕೆ ಬರಲಿಲ್ಲವೇ ಸ್ವಾಮಿ ?

ಶ್ರೀ ಆರ್. ಎಂ. ಪಾಟೀರ್.—ಅಲ್ಲನ ಜನತೆಯ ಸ್ವಭಾವ ಬದಲಾಗಿದೆ, ಪೋಲೀಸರದಲ್ಲ.

Sri DIGAMBARA RAO B. KALMANKAR.— Out of these reported murder cases, how many of them have been charge-sheeted and how many convictions have been obtained ?

Sri R. M. PATIL.—Sir, for the year 1966-67 out of these 40 cases one case was found to be false; 5 cases were due to mistake of facts; 7 cases were undetected; 11 cases were convicted; 7 cases were acquited; 9 cases are pending trial in the the courts. For the year 1967-68, out of the 49 cases, one case was closed on medical report; one case was transferred to other district : 3 cases were convicted; 3 cases were acquited; 5 cases were undetected, 4 cases were rebated; 24 cases are pendig trial and 9 cases are under investigation.

ಶ್ರೀ ನದಾಶಿವಪ್ಪ ಪಾಟೀರ್.—ದ್ವೇಷದಿಂದ ಆಗಿರುವ ಕೊಲೆಗಳು 5 ರಿಂದ 8ಕ್ಕೆ ಹೆಚ್ಚಿದೆ ಮತ್ತು ಅನಿರೀಕ್ಷಿತ ಜಗಳಗಳಿಂದ ಆಗಿರುವ ಕೊಲೆಗಳೂ ಹೆಚ್ಚಿವೆ. ಯಾವುದಾದರೂ ಒಂದು ಗ್ರಾಮದಲ್ಲಿ ಏನಾದರೂ ಸಣ್ಣ ಪುಟ್ಟ ಜಗಳಗಳು ಸಂಭವಿಸುವುದಕ್ಕೆ ಮೊದಲೇ ಪೋಲೀಸಿನವರಿಗೆ ಗೊತ್ತಾಗಿರುತ್ತದೆ ಎಂದು ನನ್ನ ಅಭಿಪ್ರಾಯವಿದೆ. ಇದರ ಬಗ್ಗೆ ಸರ್ಕಾರದವರು ಏನು ಹೇಳು ತ್ತಾರೆ ? ಪೋಲೀಸಿನವರಿಗೆ ಗೊತ್ತಿಲ್ಲದೆಯೇ ಆಗು ದೆಯೇ ?

Sri R. M. PATIL.—Sir, in cases where police are not in the know of things, certain cases do occur.

Cases under Section 174 Cr. P.C. in Raichur Division

106. Sri M. NAGAPPA (Raichur).—

Will the Minister for Home and Municipal Administration be pleased to state :—

(*a*) the number of cases reported under section 174 Cr.P.C. within Raichur Division of D.S.P., Raichur between January 1966 to end of October, 1967;

(*b*) whether Government have received any complaints out of these accidental deaths;

(*c*) if so, the action taken by the Government on such complaints ?